ಜೆಎಸ್‌ಎಸ್ ಮಹಾವಿದ್ಯಾಪೀಠ
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಸ್ವಾಯತ್ತ)
ಬಿ.ಎನ್. ರಸ್ತೆ, ಮೈಸೂರು – 570 025
ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)
Ph: 0821-2548236 & 2548380. FAX: 0821-2548238 E-mail: jssautonomous@gmail.com Website: JSSCACS.edu.in

ದಿನಾಂಕ: 14.09.2017

**ಪ್ರಕಟಣೆಯ ಕೃಪೆಗಾಗಿ**

**ರಾಷ್ಟ್ರೀಯ ಭಾವೈಕ್ಯತೆಯಲ್ಲಿ ಹಿಂದಿ ಭಾಷೆಯ ಮಹತ್ವ**

ಡಾ. ಎಚ್.ಎಂ. ಕುಮಾರಸ್ವಾಮಿ

"ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಹಿಂದಿ ಬಳಕೆಯಲ್ಲಿದೆ. ಅಂತೆಯೇ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ನಾನಾ ಸಂಸ್ಕೃತಿಗಳು ನೆಲೆಸಿವೆ. ಅವುಗಳೊಳಗೆ ಏಕತೆಯೊಂದನ್ನು ತರುವ ಸಾಮರ್ಥ್ಯ ಹಿಂದಿ ಭಾಷೆಗಿದೆ" ಎಂದು ನಿವೃತ್ತ ಪ್ರಾಂಶುಪಾಲರಾದ ಡಾ. ಎಚ್.ಎಂ. ಕುಮಾರಸ್ವಾಮಿ ಅವರು ತಿಳಿಸಿದರು.

ಮೈಸೂರು ನಗರದ ಬಿ ಎನ್ ರಸ್ತೆಯಲ್ಲಿರುವ ಜೆಎಸ್‌ಎಸ್ ಪದವಿ ಕಾಲೇಜಿನಲ್ಲಿ ಹಿಂದಿ ವಿಭಾಗದ ವತಿಯಿಂದ ಹಿಂದಿ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಡಾ. ಎಚ್.ಎಂ. ಕುಮಾರಸ್ವಾಮಿಯವರು "ಯಾವುದೇ ಭಾಷೆಯ ಸತ್ವ ಇರುವುದು ಅದರ ಕೊಳು ಕೊಡುಗೆಯಲ್ಲಿ. ಹಿಂದಿ ಭಾಷೆಯು ಜಗತ್ತಿನ ನಾನಾ ಭಾಷೆಗಳಿಂದ ಸ್ವೀಕಾರವನ್ನು ಪಡೆದಿದೆ. ಅಂತೆಯೇ ಅನೇಕ ಭಾಷೆಗಳ ಮೇಲೆ ತನ್ನ ಪ್ರಭಾವವನ್ನು ಬೀರಿದೆ. ರಾಷ್ಟ್ರೀಯ ಭಾವೈಕ್ಯತೆಯನ್ನು ಬೆಸೆಯುವಲ್ಲಿ ಹಿಂದಿಯ ಪಾತ್ರ ಬಹಳ ಪ್ರಮುಖವಾದುದು. ಅಂತಹ ಸಾಮರ್ಥ್ಯ ಹಿಂದಿ ಭಾಷೆಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯರವರು ಮಾತನಾಡುತ್ತಾ "ಪ್ರಪಂಚದ 7000 ಭಾಷೆಗಳಲ್ಲಿ ಹಿಂದಿಯು ಪ್ರಮುಖ ಭಾಷೆಗಳಲ್ಲಿ ಒಂದಾಗಿದೆ. ನಮ್ಮ ದೇಶದ 6 ರಾಜ್ಯಗಳಲ್ಲಿ ಹಿಂದಿ ಭಾಷೆ ಹೆಚ್ಚು ಬಳಕೆಯಲ್ಲಿದೆ. ಭಾಷೆ ಸಂವಹನ ಮತ್ತು ವಿಚಾರ ವಿನಿಮಯಕ್ಕೆ ಮುಖ್ಯವಾದುದು. ಭಾಷೆಗಳನ್ನು ಹೆಚ್ಚೆಚ್ಚು ಕಲಿತಷ್ಟು ಜ್ಞಾನ ವೃದ್ಧಿಯಾಗುತ್ತದೆ. ಆದ್ದರಿಂದ ಮಾತೃಭಾಷೆಯ ಜೊತೆ ಹಿಂದಿಯನ್ನು ಕಲಿಯಿರಿ. ಭಾಷೆಗಳ ಅಧ್ಯಯನ ಮಾಡುವುದಕ್ಕೆ ಕೇಂದ್ರ ಸರ್ಕಾರದಿಂದ ಉತ್ತಮವಾದ ಪ್ರೋತ್ಸಾಹ ದೊರೆಯುತ್ತಿದೆ" ಎಂದು ಹೇಳಿದರು.

ಕು. ವಂದನ ಪ್ರಾರ್ಥಿಸಿದರು, ಕು. ಆರ್ಯ ನಿರೂಪಿಸಿದರು. ಶ್ರೀ ಅಂಕುರ್ ವಂದಿಸಿದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು, ಹಿಂದಿ ವಿಭಾಗದ ಮುಖ್ಯಸ್ಥರಾದ ಶ್ರೀಮತಿ. ಸಿದ್ದಗಂಗಮ್ಮ ನವರು ಉಪಸ್ಥಿತರಿದ್ದರು.

ಪ್ರಾಂಶುಪಾಲರು

**PRINCIPAL**
J.S.S. College of Arts, Commerce & Science
Ooty Road, Mysore-570025

ಗೆ
ಸಂಪಾದಕರು
--------------
--------------
ಮೈಸೂರು